ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ
Government of Karnataka
Department of Collegiate Education

NO. 1, 2nd Floor, DTE Building, Palace Road, Bangalore - 560 001; Phone: 080 22263327; email: bngcce@kar.nic.in

ಸಂಖ್ಯೆ: ಕಾಶಿಇ/ಮಾತಂವಿ/18/ಬಯೋಮೆಟ್ರಿಕ್/2016-17 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:10.02.2020.

# ಸುತ್ತೋಲೆ

ವಿಷಯ: ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅಳವಡಿಸಿರುವ ಬಯೋಮೆಟ್ರಿಕ್ ಆನ್‌ಲೈನ್ ಇಲ್ಲದಿರುವ ಬಗ್ಗೆ

ಉಲ್ಲೇಖ:
1. ಈ ಕಛೇರಿ ಸುತ್ತೋಲೆ ಸಂ: ಕಾಶಿಇ/ಶೈವಿ/92/ವಿವಿಧ/ಸುತ್ತೋಲೆ/2014-15 ದಿನಾಂಕ: 30.03.2015.
2. ಈ ಕಛೇರಿ ಸುತ್ತೋಲೆ ಸಂ: ಕಾಶಿಇ/ಮಾತಂವಿ/18/ಬಯೋಮೆಟ್ರಿಕ್/2016-17 ದಿನಾಂಕ: 23.10.2016.

******

ಸರ್ಕಾರದ ಸುತ್ತೋಲೆ ಸಂ:ಸಿಆಸುಇ/29/ತಎಇ/2012, ದಿನಾಂಕ: 04.09.2013ರಲ್ಲಿ ತಿಳಿಸಿರುವಂತೆ ರಾಜ್ಯದ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಲು ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಈಗಾಗಲೇ ಕಾಲೇಜು ಶಿಕ್ಷಣ ಇಲಾಖೆಯ ಕೇಂದ್ರ ಕಛೇರಿ, ಪ್ರಾದೇಶಿಕ ಕಚೇರಿ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಅಳವಡಿಸಲಾಗಿದ್ದು, ಇತ್ತೀಚಿನ ದಿನಗಳಲ್ಲಿ ಕಛೇರಿ/ಕಾಲೇಜುಗಳ ಬಯೋಮೆಟ್ರಿಕ್ ಡಿವೈಸ್‌ಗಳು ಆನ್‌ಲೈನ್ ಇಲ್ಲದಿರುವುದು ಕಂಡುಬಂದಿರುತ್ತದೆ. ಆದುದರಿಂದ ತಮ್ಮ ಕಛೇರಿ/ಕಾಲೇಜುಗಳ ಬಯೋಮೆಟ್ರಿಕ್ ಡಿವೈಸ್‌ನಲ್ಲಿ ಈ ಕೆಳಕಂಡ IP Address and Port Number ನಮೂದಿಸಲಾಗಿದೆಯೇ ಎಂದು ದೃಢೀಕರಿಸಿ, ದಿನಾಂಕ: 20.02.2020ರೊಳಗೆ ಆನ್‌ಲೈನ್ ನಲ್ಲಿ ಬಯೋಮೆಟ್ರಿಕ್ ಡಿವೈಸ್‌ಗಳ ಕೆಲಸ ಮಾಡುವಂತೆ ತಮ್ಮ ಹಂತದಲ್ಲಿಯೇ ಪರಿಶೀಲಿಸಬೇಕಾಗಿರುತ್ತದೆ. ಹಾಗೆಯೇ ಬಯೋಮೆಟ್ರಿಕ್ ಡಿವೈಸ್‌ಗಳು ಆನ್‌ಲೈನ್ ತರಲು ಸಂಬಂಧಪಟ್ಟ 'VIDEO' ಅನ್ನು ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು/ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳ ಮೊಬೈಲ್‌ಗಳಿಗೆ ಕಳುಹಿಸಿಕೊಡಲಾಗಿದೆ.

ಮೇಲ್ಕಂಡ ಅಂಶಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

**IP Address: 103.138.196.28**
**Port Number: 8080**

**ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು**

**ಇವರಿಗೆ,**

1. ಸಂಬಂಧಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
2. ಎಲ್ಲಾ ಆರು ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – ತಮ್ಮ ವ್ಯಾಪ್ತಿಯ ಕಾಲೇಜುಗಳಲ್ಲಿ ಬಯೋಮೆಟ್ರಿಕ್ ಹಾಜರಾತಿ ಬಗ್ಗೆ ಪ್ರತಿ ಮಾಹೆಯ ವರದಿ ಪರಿಶೀಲಿಸಲು ಸೂಚಿಸಲಾಗಿದೆ.

**ಪ್ರತಿಯನ್ನು:**

1. ಕಾಲೇಜು ಶಿಕ್ಷಣ ಆಯುಕ್ತರ ಆಪ್ತಶಾಖೆಗೆ – ಮಾಹಿತಿಗಾಗಿ.
2. ಕಾಲೇಜು ಶಿಕ್ಷಣ ನಿರ್ದೇಶಕರು/ಮುಖ್ಯ ಆಡಳಿತಾಧಿಕಾರಿಗಳ ಆಪ್ತಶಾಖೆಗೆ – ಮಾಹಿತಿಗಾಗಿ.
3. ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.